30ನೇ ವರ್ಷದಲ್ಲಿ..... RNI.No. 65087/96 Regd.No. KA/SK/CKM/427/2018-20

# ಮಲೆನಾಡು ಜ್ಯೋತಿ

## ಜಿಲ್ಲಾ ಮಟ್ಟದ ವಾರಪತ್ರಿಕೆ

MALENADU JYOTHI KANNADA WEEKLY



ಸಂಪಾದಕ :
ಎಸ್.ಸುರೇಶ್ಚಂದ್ರ,
ಬಿ.ಎ.ಜಿ.ಡಿ.ಸಿ., ಎಲ್.ಎಲ್.ಬಿ.
ಮೊ : 9448406869

ಉಪ ಸಂಪಾದಕ :
ಬಿ.ಎಂ.ಮಲ್ಲಿಕಾರ್ಜುನ
ಬೆಲೇನಹಳ್ಳಿ
ಮೊ : 9740941655



ಸಂಚಿಕೆ : 16 ಸಂಪುಟ –30 ದಿನಾಂಕ : 20–01–2026ರಿಂದ 26–01–2026 ಬೆಲೆ ರೂ 5/– ಪುಟ –4

## ಭದ್ರಾ ಯೋಜನೆಯಲ್ಲಿ ಕೆಲವು ಲೋಪದೋಶಗಳು ಆಗಿದ್ದು ನಿಜ ಅದು ನನಗೂ ಕೂಡು ತೃಪ್ತಿತಂದಿಲ್ಲ : ಜಿ.ಹೆಚ್.ಶ್ರೀನಿವಾಸ್

ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಗಳ ವಿಚಾರದಲ್ಲಿ ರೈತರು ವಾಟ್ಸಪ್‌ನಲ್ಲಿ ಬಂದ ವಿಚಾರಗಳನ್ನು ನಂಬದೇ ನೈಜವಾಗಿ ಸಮಸ್ಯೆಗಳನ್ನು ನಮ್ಮ ಹತ್ತಿರ ಹೇಳಿದರೆ ಬಗೆಹರಿಸುತ್ತೇವೆ ಎಂದು ತರೀಕೆರೆ ಶಾಸಕರಾದ ಜಿ.ಹೆಚ್ ಶ್ರೀನಿವಾಸ್ ರವರು ಭದ್ರಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ನೀರು ಬಳಕೆದಾರರ ಸಂಘಗಳ ತರಬೇತಿ ಶಿಭಿರದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಯೋಜನೆಯಲ್ಲಿ ಕೆಲ ಲೋಪದೋಶಗಳು ಆಗಿದ್ದು ನಿಜ ಅದು ನನಗೂ ಕೂಡ ತೃಪ್ತಿ ತಂದಿಲ್ಲ. ಯೋಜನೆಯಲ್ಲಿ 120 ಕೆರೆಗಳಿಗೆ ನೀರು ತುಂಬಿಸುವಂತೆ ಹೇಳಿದ್ದೆ. ಈ ವಿಷಯದಲ್ಲಿ ಬಿ.ಜೆ.ಪಿ ಯವರು ನನ್ನ ವಿರುದ್ಧ ರಾಜಕೀಯ ಪಿತೂರಿ ನಡೆಸಿ ಲಕ್ಕವಳ್ಳಿ ಭಾಗದ ರೈತರು ನನಗೆ ಕೆಟ್ಟದಾಗಿ ನಿಂದಿಸಿರುತ್ತಾರೆ. ಹಾಗೂ ದಾವಣಗೆರೆ ರೈತರು ಸಹ ಆಕ್ಷೇಪಣೆ ಮಾಡಿರುತ್ತಾರೆ.

ಅಬ್ಬನಹೊಳಲು ಮತ್ತು ಹೆಬ್ಬೂರು ರೈತರಿಗೆ ಜಮೀನು ಕಳೆದುಕೊಂಡ ರೈತರಿಗೆ ಹೆಚ್ಚಾಗಿ ಹಣ ಕೊಡಿಸಲಾಗುವುದು ಎಂದು ಹೇಳಿದರು.




ಭದ್ರಾಕಾಡ ಅಧ್ಯಕ್ಷರಾದ ಡಾ||ಅಂಶುಮತ್ ಮಾತನಾಡಿ ಅಜ್ಜಂಪುರ ಭದ್ರಾ ನೀರು ಬಳಕೆದಾರರದ್ದು 40 ಸಂಘಗಳಿದ್ದು, ಇವುಗಳಲ್ಲಿ 10 ಸಂಘಗಳು ಕ್ರಿಯಾಶೀಲವಾಗಿರುತ್ತದೆ.

ಇವರಿಗೆ ವಾರ್ಷಿಕ 50,000 ಅನುದಾನ ಕೊಡಲಾಗುತ್ತದೆ. ನೀವು ಸರ್ಕಾರದೊಂದಿಗೆ ಕೈಜೋಡಿಸಿದರೆ ಸರ್ಕಾರವು ರೈತರ ಪರವಾಗಿದ್ದು ಶಾಸಕರು ಸಹ ರೈತರಿಗೆ ಹೆಚ್ಚು ಸಕ್ರಿಯವಾಗಿ ಕೆರೆಗೆ ನೀರು ಹರಿಸಲು ಶತ ಪ್ರಯತ್ನ ಮಾಡುತ್ತಾರೆ. ಯಾವುದೇ ವದಂತಿಗಳಿಗೆ ಕಿವಿ ಗೊಡಬಾರದೆಂದು ಕಿವಿ ಮಾತು ಹೇಳಿದರು.

ಈ ಸಭೆಯಲ್ಲಿ ಮುಖ್ಯ ಎಂಜಿನಿಯರ್ ಕವಿತಾ, ಸಹಾಯಕ ಎಂಜಿನಿಯರ್ ಶ್ರೀಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ದಯಾನಂದ್, ಸುತ್ತಮುತ್ತಲಿನ ರೈತರು ಭಾಗವಹಿಸಿದ್ದರು.

## ನಾಟಕಗಳು ಮನೋರಂಜನೆ ಜೊತೆಗೆ ಮನೋವಿಕಾಸ ನೀಡುತ್ತದೆ ಸಾಣೆಹಳ್ಳಿ ಡಾ|| ಪಂಡಿತಾರಾಧ್ಯ ಶಿವಚಾರ್ಯ ಸ್ವಾಮೀಜಿ

ರಂಗ ಸಂಕ್ರಾತಿ ನಾಟಕೋತ್ಸವ ಹಾಗೂ ಕೈಲಾಸಂ ಕಲಾ ಕ್ಷೇತ್ರದಲ್ಲಿ ರಜತ ಮಹೋತ್ಸವ ಸಮಾರಂಭ. ನಾಟಕಗಳು ಮನೋರಂಜನೆ ಜೊತೆಗೆ ಮನೋವಿಕಾಸ ನೀಡುತ್ತದೆ ಎಂದು ಸಾಣೆಹಳ್ಳಿ ಡಾ|| ಪಂಡಿತಾರಾಧ್ಯ ಶಿವಚಾರ್ಯ ಸ್ವಾಮೀಜಿಯವರು ಅಜ್ಜಂಪುರದ ಗೆಳೆಯರ ಬಳಗ ರಂಗ ತಂಡದ ಕೈಲಾಸಂ ಕಲಾಕ್ಷೇತ್ರದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಯುವಕರು ನಾಟಕಗಳನ್ನು ನೋಡುವಂತೆ ಮಾಡಬೇಕು ಅದಕ್ಕೆ ಮುಂದಿನ ನಾಟಕೋತ್ಸವದಲ್ಲಿ ಈ ಬಗ್ಗೆ ಒಂದು ಪ್ರಯತ್ನ ಮಾಡಲಿ ಎಂದರು. ಸಮಾರೋಪ ನುಡಿಯಲ್ಲಿ ಡಾ|| ಎನ್.ಎಲ್. ಆನಂದ್‌ರವರು ಮಾತನಾಡಿ ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಕ್ಕೆ ಅಜ್ಜಂಪುರದ ಗೆಳೆಯರ ಬಳಗದ ಎ.ಸಿ ಚಂದ್ರಪ್ಪನವರು 40 ವರ್ಷಗಳಿಂದ ಈ ಕ್ಷೇತ್ರದಲ್ಲಿ ಸೇವೆ ಮಾಡಿ ಹೆಸರು ಮಾಡಿರುತ್ತಾರೆ. ಇಂದಿನ ಯುವಕರು ಬಂದು ಇದಕ್ಕೆ ಅವರ ಜೊತೆಯಾಗಿ ನಿಲ್ಲ ಬೇಕು ಎಂದು ಸಂದೇಶವನ್ನು ನೀಡಿದರು. ನಾಟಕೋತ್ಸವ ಉದ್ಘಾಟಿಸಿದ ಮಾಜಿ ಶಾಸಕ ಡಿ.ಎಸ್ ಸುರೇಶ್ ರವರು ಮಾತನಾಡುತ್ತಾ ಅಜ್ಜಂಪುರ ರಂಗ ಭೂಮಿ ಬೀಡಾಗಿದೆ. ಇಂದಿನ ದಿನಗಳಲ್ಲಿ ಟಿವಿ ಸಿನಿಮಾಗಳಲ್ಲಿ ಹೆಚ್ಚು ಪ್ರೋತ್ಸಾಹವನ್ನು ನೀಡುತ್ತಾರೆ.

ಆದರೆ ರಂಗ ಕಲೆಗೆ ಮಾತ್ರ ಕಡಿಮೆ ಪ್ರೋತ್ಸಾಹ ನೀಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಎ.ಸಿ ಚಂದ್ರಪ್ಪನವರು ಹೆಚ್ಚಿನ ಶ್ರಮವಹಿಸಿ ರಂಗನಾಟಕೋತ್ಸವವನ್ನು ಮಾಡುತ್ತಿರುವುದು ತುಂಬಾ ಖುಷಿ ತಂದಿದೆ ಎಂದು ಹೇಳಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಮಾರೋಪ ಸಮಾರಂಭದಲ್ಲಿ ತರೀಕೆರೆಯ ಕನ್ನಡ ಪ್ರಭ ಹಿರಿಯ ವರದಿಗಾರರಾದ ತರೀಕೆರೆ ಅನಂತ ನಾಡಿಗ್ ರವರಿಗೆ ಮಾಧ್ಯಮ ಅಕಾಡಮಿಯ ಪ್ರಶಸ್ತಿ ಬಂದಿರುವ ಹಿನ್ನೆಲೆಯಲ್ಲಿ ಅವರನ್ನು ಗೌರವಿಸಲಾಯಿತು.ಮುಖ್ಯ ಅತಿಥಿಗಳಾಗಿ ಎಂ.ಕೆ ವಿಜಯ್ ಕುಮಾರ್, ಹೆಚ್ ಆರ್ ಚಂದ್ರಪ್ಪ, ಎಸ್ ಪ್ರಕಾಶ್, ನಿಸ್ಸಾರ್ ಅಹಮ್ಮದ್, ಬಿ.ರಂಗಸ್ವಾಮಿ ಭಾಗವಹಿಸಿದ್ದರು. ಈ ಸಮಾರೂಪ ಸಮಾರಂಭದ ಅಧ್ಯಕ್ಷತೆಯನ್ನು ರಂಗ ತಂಡದ ಕಾರ್ಯದರ್ಶಿ ಎಸ್. ಮೋಹನ್‌ರಾವ್ ಜಾದವ್‌ರವರು ವಹಿಸಿದ್ದರು. ಈ ರಂಗ ಸಂಕ್ರಾತಿ ನಾಟಕೋತ್ಸವದಲ್ಲಿ ಪ್ರತಿದಿನ ಸಪ್ತಸ್ವರ ಸಂಗೀತ ಶಾಲಾ ತಂಡ ಇವರಿಂದ ವಚನ ಗಾಯನ, ಕುಮಾರಿ ಆರ್ ಮಾನ್ಯ ಪವಾರ್ ಅವರಿಂದ ಭರತನಾಟ್ಯ, ಅಜ್ಜಂಪುರದ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು ಮೂಡಿಬಂದವು. ಈ ಕಾರ್ಯಕ್ರಮದಲ್ಲಿ ಎ ಎಸ್, ಕೃಷ್ಣಮೂರ್ತಿ ಸತೀಶ್, ಮದು ಮಾಲತಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಿರೂಪಣೆ ಮಾಡಿದರು.



## ಮಹಿಳೆಯರೇ ಮಾಡಿದ ಉದ್ಯೋಗ ಮಾರಾಟ ಮೇಳದಲ್ಲಿ ಗ್ರಾಹಕರು ಕೊಂಡರೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ : ಅಧ್ಯಕ್ಷೆ ಅನಿತಾ ಪ್ರಭು

ಅಜ್ಜಂಪುರದಲ್ಲಿ ಅವರೇ ಬೇಳೆ ಮೇಳ. ಮಹಿಳೆಯರೇ ಮಾಡಿದ ಉದ್ಯೋಗ ಮಾರಾಟ ಮೇಳದಲ್ಲಿ ಗ್ರಾಹಕರು ಕೊಂಡುಕೊಳ್ಳುವುದರಿಂದ ಹೆಚ್ಚು ಪ್ರೋತ್ಸಾಹ ಕೊಟ್ಟಂತಾಗುತ್ತದೆ ಎಂದು ಇನ್ನರ್ ವೀಲ್ ಪ್ರಿನ್ಸ್‌ಕ್ಲಬ್ ಅಧ್ಯಕ್ಷರಾದ ಅನಿತಾ ಪ್ರಭು ಅವರು ಹೇಳಿದರು.

ಅವರು ಅಜ್ಜಂಪುರದ ಬೀರೂರು ರಸ್ತೆಯಲ್ಲಿರುವ ವೃಂದಾವನ ಕನ್‌ವೆನ್‌ಶನ್ ಹಾಲ್ನಲ್ಲಿ ಕಡೂರು ಸಾಯಿ ಈವೆಂಟ್ಸ್ ಅವರು ಆಯೋಜಿಸಿದ್ದ ಅವರೆ ಬೇಳೆ ಉತ್ಸವ ಹಾಗೂ ಲೈಫ್ ಸ್ಟೈಲ್ ಮಾರಾಟ ಮಳಿಗೆ ಯನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಈ ಕಾರ್ಯಕ್ರಮವು ಯಶಸ್ವಿಯಾಗಲೆಂದು ಶುಭಕೋರಿದರು. ಸಾಯಿ ಈವೆಂಟ್ನ ರಾಜೇಶ್ವರಿ ಯವರು ಮಾತನಾಡಿ ಅಜ್ಜಂಪುರದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲು ಹೆಚ್ಚು ಶ್ರಮವಹಿಸಿದ ಇನ್ನರ್ ವೀಲ್ ಕ್ಲಬ್‌ನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳಿಗೆ ಕೃತಘ್ನತೆ ಸಲ್ಲಿಸಿದರು. ಕಾರ್ಯದರ್ಶಿಗಳಾದ ಭೂಮಿಕಾ ಪ್ರದೀಪ್ ಕುಮಾರ್ ರವರು ಅಜ್ಜಂಪುರದಲ್ಲಿ ಪ್ರಪ್ರಥಮ ಬಾರಿಗೆ ಈ ಮೇಳ ನಡೆಸುತ್ತಿರುವುದು ತುಂಬಾ ಸಂತೋಷಕರ ವಿಚಾರ ವಾಗಿದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಸಾಯಿ ಈವೆಂಟ್ ವ್ಯವಸ್ಥಾಪಕರಾದ ಸೋಮೇಶ್, ಮತ್ತು ಅವರ ಸಹೋದ್ಯೋಗಿಗಳು ಹಾಜರಿದ್ದರು.



# " ಅಸೆಂಬ್ಲಿ ಡೇಸ್ " ಪ್ರಯತ್ನಗಳು ಫಲ ನೀಡುತ್ತದೆ ಡಿಕೆಶಿಗೊಬ್ಬ ಮೀಡಿಯಾ ಪರ್ಸನ್ ಬೇಕಿತ್ತು.

ವಿಧಾನಸಭೆಯ ವಿರೋಧ ಪಕ್ಷದ ಮೊಗಸಾಲೆಯಲ್ಲಿನ ಕ್ಯಾಂಟೀನ್ ಗೆ ಬೈಟೂ ಕಾಫೀ ಆರ್ಡರ್ ಮಾಡಿ ಲಂಕೇಶ್ ಪತ್ರಿಕೆಯ ಟಿ ಕೆ ತ್ಯಾಗ 'ರಾಜರ ಜತೆ ಕುಳಿತಿದ್ದೆ. ಹಾಜರಿ ಪುಸ್ತಕಕ್ಕೆ ಸಹಿ ಹಾಕಲು ಬಂದ ಡಿ.ಕೆ.ಶಿವಕುಮಾರ್ ನಮ್ಮನ್ನು ನೋಡಿ ಸೀದಾ ಬಂದು ನನ್ನ ಎಡ ಭಾಗದ ಸೋಫಾದಲ್ಲಿ ಕುಳಿತು 'ಎಲ್ಲರಿಗೂ ಕಾಫೀ ತಗಂಬಾರೋ ಎಂದು ಕ್ಯಾಂಟೀನ್ ಹುಡುಗನನ್ನು ಕೂಗಿದರು. ನನ್ನ ಬಲಭಾಗದಲ್ಲಿ ಕೈಯಲ್ಲಿ ಹೆಲ್ಮೆಟ್ ಹಿಡಿದು ಕೂತಿದ್ದ ಟಿ.ಕೆ.ತ್ಯಾಗರಾಜ್ ಚಡಪಡಿಸ ತೊಡಗಿದ್ದರು.

ಕಾಫೀ ಬರುವ ಮುನ್ನವೇ ' ಅಶೋಕ್ ನಾ ಬರ್ತಿನಿ ' ಎಂದು ಮೆಲು ದನಿಯಲ್ಲಿ ಉಸುರಿ ಮೇಲೆದ್ದರು. ಆ ವಾರದ ಲಂಕೇಶ್ ಪತ್ರಿಕೆಯಲ್ಲಿ " ಕೆಡಿ ಡಿಕೆ " ಪ್ರಮುಖ ಲೇಖನ ರಾರಾಜಿಸಿತ್ತು. ಆ ವಿಶೇಷ ವರದಿ ಬರೆದವರು ಟಿ ಕೆ ತ್ಯಾಗರಾಜ್ ಎಂದು ಗೊತ್ತಿದ್ದರೂ ಡಿಕೆ ಶಿವಕುಮಾರ್ ಆ ಸಂಗತಿಯನ್ನು ಪ್ರಸ್ತಾಪಿಸದೇ 'ನನಗೊಬ್ಬ ಮೀಡಿಯಾ ಪರ್ಸನ್ ಬೇಕು ' ಎಂದರು. ಅಸೆಂಬ್ಲಿಯ ಹಳೆಯ ಕೋರಂ ಬೆಲ್ ಕಿರುಗುಟ್ಟಲು ಶುರುವಾಯಿತು.

ವಿರೋಧಪಕ್ಷದ ನಾಯಕರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಕಚ್ಚೆ ಪಂಚೆಯ ತುದಿಯನ್ನು ಕೈಯಲ್ಲಿ ಡಿದು ಆರಾಮವಾಗಿ ನಡೆದು ಬಂದರು. ಅವರ ಹಿಂದೆಯೇ ಲಘು ಬಗೆಯಿಂದ ನಮ್ಮ ಎಂ ಎನ್ ವಿಜಯೇಂದ್ರ ಓಡೋಡಿ ಬಂದರು. ಆತನ ಎಡಗೈನಲ್ಲಿ ಒಂದು ಫೈಲು ಜತೆಗೆ ಯಾವುದೋ ಪುಸ್ತಕವೂ ಇತ್ತು.

ಬಲಗೈನಲ್ಲಿ ರೆನಾಲ್ಡ್ ಪೆನ್ನು ಸರಳ ಆಕೃತಿಯ ವಿಜಯೇಂದ್ರ ಖರ್ಗೆಯವರ ಮೀಡಿಯಾ ಸೆಕ್ರೆಟರಿಯಾದರೂ ಯಾವುದೇ ಹಮ್ಮು ಬಿಮ್ಮು ಇಲ್ಲದ ಪತ್ರಕರ್ತ. ಎಲ್ ಹೆಚ್ ಕ್ಯಾಂಟೀನ್ ಗುಂಡ ತಂದು ಕೊಟ್ಟ ಕಾಫೀ ಹೀರುತ್ತ ಡಿಕೆ ಶಿವಕುಮಾರ್' ನನಗೊಬ್ಬ ಮಿಡೀಯಾ ಪರ್ಸನ್ ಬೇಕಲ್ಲ ಗುರೂ, ಇವನ ತರಾ ಇರಬೇಕು' ನಾನು ತಕ್ಷಣ ವಿಜಿ ತರಹ ಕಷ್ಟ . ಬೇರೆ ಒಂದಿಬ್ಬರು ಇದಾರೆ ಬೇಕಾದರೆ ಹೇಳೀನಿ ಅಂದೆ. ಡಿಕೆ ನನ್ನ ಕಡೆ ನೋಡಿದರು. ಒಬ್ಬರು ಎಂ ಎನ್ ಚಕ್ರವರ್ತಿ, ಮತ್ತೊಬ್ಬರು ಕೆ ಜೆ ನಾಗರಾಜ್ ಎಂದೆ.

ಚಕ್ರವರ್ತಿ ಅಲಿಯಾಸ್ ನಚ್ಚಿ ಶಿವಕುಮಾರಗೆ ಗೊತ್ತಿತ್ತು. ಪತ್ರಕರ್ತ ಚಕ್ರವರ್ತಿ ಮತ್ತು ಕೆ ಜೆ ನಾಗರಾಜ್ ಅವರುಗಳಿಗೆ ಕೆಲಸ ಮತ್ತು ಹಣದ ಮುಗ್ಗಟ್ಟು ಬಹಳ ಇತ್ತು ಎಂಬುದು ನನಗೆ ಗೊತ್ತಿತ್ತು. ಇಂಡಿಯನ್ ಎಕ್ಸಪ್ರೆಸ್ ನಿವೃತ್ತಿ ನಂತರ ನಚ್ಚಿ ನಮ್ಮ ಕಛೇರಿಗೆ ಬಂದು ಕೂರುತ್ತಿದ್ದರು. ಒಂದು ಕಾಲದಲ್ಲಿ ಹಿಂದೂಸ್ಥಾನ್ ಟೈಮ್ಸ್ ನಲ್ಲಿದ್ದ ಕೆ ಜೆ ನಾಗರಾಜ್ ಸಣ್ಣ ಪುಟ್ಟ ಪತ್ರಿಕೆಗಳಿಗೆ ಬರೆದು ಕೊಡುತ್ತಿದ್ದರು.



ಡಿ ಕೆ ಶಿವಕುಮಾರ್ ಕೆಲವು ವಿಚಾರಗಳಲ್ಲಿ ದೇವೇಗೌಡರನ್ನು ಫಾಲೋ ಮಾಡಲು ಪ್ರಯತ್ನಿಸುತ್ತಿದ್ದರು. ಗೌಡರು ಪತ್ರಿಕೋದ್ಯಮದಲ್ಲಿ ಕೆಲವರ ಸಲಹೆಗಳನ್ನು ಪಡೆಯುತ್ತಿದ್ದರು.ಉದಾಹರಣೆಗೆ ಎನ್.ಎಸ್. ರಾಮಪ್ರಸಾದ್, ಜಯಶೀಲರಾವ್, ವೆಂಕಟ ನಾರಾಯಣ, ಕೆ ಸತ್ಯನಾರಾಯಣ, ಪಿ ರಾಮಯ್ಯ ಮುಂತಾದವರು !

ತಮಗೆ ಬೇಕಾದ್ದನ್ನು ಪಡೆಯಲು ಯಾವುದೇ ಮಾರ್ಗವಾದರೂ ಸರಿಯೇ ಮತ್ತು ಬೇಡವಾದದ್ದನ್ನು ನೆಗ್ಲೆಟ್ ಮಾಡಲು ಡಿಕೆಶಿ ಗೌಡರನ್ನು ಫಾಲೋ ಮಾಡಲು ತಿಣುಕಾಡುತ್ತಿದ್ದ ಸಮಯವದು.

ಕಾಂಗ್ರೆಸ್ ಪ್ರಚಾರ ಸಮಿತಿಯಲ್ಲಿದ್ದ ಶಿವಕುಮಾರ್‌ಗೆ ಆ ರೀತಿಯ ಒಬ್ಬರು ಮೀಡಿಯಾ ಅಸರ್ ಬೇಕೇ ಬೇಕಿತ್ತು. ಅಳೆದು ಸುರಿದು ಪತ್ರಕರ್ತ ಸಂಜಯ್ ದೊರೆ ಆ ಕೆಲಸಕ್ಕೆ ನೇಮಕವಾದರು.

ಸಂಜಯ್ ದೊರೆಗೆ ಎಲ್ ಹನುಮಂತಯ್ಯ ಮತ್ತು ಮೋಹನ್ ಕೊಂಡಜ್ಜಿಯವರ ಶಿಫಾರಸು ಇತ್ತು. ಮುಂದಿನ ರಾಜಕೀಯ ಬೆಳವಣಿಗೆಯಲ್ಲಿ ಖರ್ಗೆಯವರು ಕಾಂಗ್ರೆಸ್ ಗೆ ಪಾದಾರ್ಪಣೆ ಮಾಡಿದ ಸಿದ್ದರಾಮಯ್ಯನವರಿಗೆ ಜಾಗ ತೆರವು ಮಾಡಿ ದೆಹಲಿಯ ಕಡೆ ಹೊರಟರು. ಇದೇ ಸಮಯ ಡಿ ಕೆ ಶಿವಕುಮಾರ್ ಬಯಸಿದ್ದು ಫಲಿಸಿತು. ಕಾವೇರಿ, ಕೃಷ್ಣಾ ನದಿನೀರಿನ ವಿಚಾರದಲ್ಲಿ ವಿರೋಧಪಕ್ಷದ ನಾಯಕರಿಗೆ ಒಂದೆರಡು ಕಿರು ಹೊತ್ತಿಗೆಯನ್ನು ಬರೆದು ಕೊಟ್ಟಿದ್ದ ವಿಜಯೇಂದ್ರ ಮೂಲತಃ ಟೈಪಿಸ್ಟ್, ಆಮೇಲೆ ಪತ್ರಕರ್ತ..... ಖರ್ಗೆ ಕಡೆಯಿಂದ ವಿಜಯೇಂದ್ರ ಡಿಕೆಶಿ ಕ್ಯಾಂಪಿಗೆ ಜಂಪ್ ಹೊಡೆದರು. ಅಲ್ಲಿದ್ದ ಸಂಜಯ್ ದೊರೆ ಸ್ವಯಂ ಮುಜುಗರ ಪಟ್ಟುಕೊಂಡು ವಿಜಯೇಂದ್ರರನ್ನು ಬೈದುಕೊಂಡು ಓಡಾಡುತ್ತಿದ್ದರು.

ಆಮೇಲೆ ಸಂಜಯ್ ದೊರೆಗೆ ಈ ಕಥೆ ಹೇಳಿದೆ. ಡಿಕೆಶಿವಕುಮಾರ್ ಬಯಸಿದ್ದು ವಿಜಯೇಂದ್ರ ಅವರನ್ನೇ, ಆದರೆ ಆತನನ್ನು ಬಿಡಲು ಖರ್ಗೆಯವರು ತಯಾರಿರಲಿಲ್ಲ. ಆಪ್ತ ಸಹಾಯಕ ಶಿವಶಂಕರ್ ಸೇರಿದಂತೆ ಹತ್ತಾರು ಜನರನ್ನು ಇಟ್ಟುಕೊಂಡಿದ್ದ ಶಿವಕುಮಾರ್ ಅವರಿಗೆ ಸಂಜಯ ದೊರೆ ಹೊರೆಯಲ್ಲ. ಆದರೆ ಸಂಜೆಯ ಆರೇಳು ಪೆಗ್ಗು ದೊರೆಗೆ ಹೊರೆಯಾಗಿ ಜೀವಕ್ಕೆ ಮುಳುವಾಯಿತು. ಕೆಲವೇ ದಿನಗಳಲ್ಲಿ ಸಂಜಯ್ ದೊರೆ ಮೂವರು ಹೆಣ್ಣುಮಕ್ಕಳ ಕುಟುಂಬವನ್ನು ಬಿಟ್ಟು ಹೊರಟೇ ಹೋದರು.

ಆ ನಂತರ ಡಿ ಕೆ ಶಿವಕುಮಾರ್ ಹಲವು ಮೊಕದ್ದಮೆಗಳನ್ನು ಎದುರಿಸಬೇಕಾಗಿ ಬಂದಾಗ ಆಪ್ತ ಕಾರ್ಯದರ್ಶಿ ಶ್ರೀಧರ್ ಸೇರಿದಂತೆ ಆಪ್ತ ಸಿಬ್ಬಂದಿಗಳ ಮನೆಗಳ ಮೇಲೂ ದಾಳಿ ನಡೆಯಿತು. ಪತ್ರಿಕಾ ಕಾರ್ಯದರ್ಶಿ ವಿಜಯೇಂದ್ರ ಡಿಕೆಶಿಯಿಂದ ಮೆಲ್ಲಗೆ ಹಿಂದೆ ಸರಿದು ನಿಂತರು. ಐವತ್ತು ರೂಪಾಯಿ ಜಾಕ್ ಪಾಟ್ ಆಡಲು ಕಾಸಿಲ್ಲದೇ ಪರದಾಡುತ್ತಿದ್ದ ವಿಜಯೇಂದ್ರ ಪ್ರೆಸ್ ಕ್ಲಬ್ ನಲ್ಲಿ ಐನೂರರ ಜಾಕ್ ಪಾಟ್ ಆಡಲು ಸ್ನೇಹಿತರನ್ನು ಹುರಿದುಂ ಬಿಸುತ್ತಿದ್ದರು. ಇದೆಲ್ಲ ಡಿಕೆಶಿ ಪ್ರಭಾವ ಎಂದು ಇತರ ಪತ್ರಕರ್ತರು ಮಾತಾಡಿಕೊಂಡರು.

2020ರ ಮಾರ್ಚಿನಲ್ಲಿ ಇದ್ದಕ್ಕಿದ್ದಂತೆ ಅವರೂ ತೀರಿ ಕೊಂಡರು. ಯಾವಾಗಲೂ ಪುಸ್ತಕದ ಹುಳು ಆಗಿದ್ದ ವಿಜಯೇಂದ್ರ ಅದಕ್ಕೂ ಮುನ್ನ ಫೆಬ್ರವರಿಯಲ್ಲಿ ವಾರ್ತಾ ಇಲಾಖೆಯ ಹೆಚ್.ಬಿ ದಿನೇಶ್ ಅವರಿಂದ ಪಾಸ್ ಪಡೆದು ಅಂತ ರಾಷ್ಟ್ರೀಯ ಚಿತ್ರೋತ್ಸವ ನೋಡಲು ತನ್ನ ಮಡದಿಯೊಂದಿಗೆ ಕಾಣಿಸಿ ಕೊಂಡದ್ದೇ ಕೊನೆಯಾಯಿತು !

ಈಗಿನ ಅವರ ಮೀಡಿಯಾ ಸೆಕ್ರೆಟರಿ ಪಿ ತ್ಯಾಗರಾಜ್ ... – ವೈ ಜಿ ಅಶೋಕ್ ಕುಮಾರ್. (ಅಸೆಂಬ್ಲಿಯಲ್ಲಿ ಎರಡು ಮೊಗಸಾಲೆಗಳಿರುವಂತೆಯೇ ಎರಡು ಬಾಗಿಲುಗಳೂ ಇವೆ. ಸಾಮಾನ್ಯವಾಗಿ ಪತ್ರಕರ್ತರು ಪ್ರತಿಪಕ್ಷದ ಮೊಗಸಾಲೆಯಲ್ಲಿರುತ್ತಾರೆ. ಆಡಳಿತ ಪಕ್ಷದ ಮೊಗಸಾಲೆಯಲ್ಲಿ ಪತ್ರಕರ್ತರು ಕಾಣಿಸಿಕೊಳ್ಳುತ್ತಿದ್ದದು ಅಪರೂಪ ಒಂದೋ ಯಾವುದಾದರೂ ಮಂತ್ರಿಯನ್ನೋ,

ಅಧಿಕಾರಿಯನ್ನೋ ಸಂದರ್ಶಿಸಲು ಹೋಗಿ ಬರುತ್ತಾರೆ.ಅಥವಾ ಯಾವುದಾದರೂ ವೈಯಕ್ತಿಕ ಕಾರ್ಯನಿಮಿತ್ತ ಅತ್ತ ಕಡೆ ಸುಳಿದಾಡುತ್ತಾರೆ.

ಈಗಿನ ಟಿವಿ ಗೂಟಗಳು ಆಡಳಿತದ ಕಡೆಗೆ ಹೆಚ್ಚು ವಾಲಿರುತ್ತಾರೆಂಬ ಆರೋಪಗಳಿವೆ.

# ನಾಯಿ–ಹಾವು ನಡುವಿನ ಕಾಳಗದ ವೀಡಿಯೋ ವೈರಲ್

ಜಿಲ್ಲೆಯ ತರೀಕೆರೆ ತಾಲೂಕಿನ ಇಟ್ಟಿಗೆ ಗ್ರಾಮದಲ್ಲಿ ರಾಟ್‌ವೀಲರ್ ತಳಿಯ ನಾಯಿಯೊಂದಕ್ಕೂ ನಾಗರಹಾವಿನ ನಡುವೆ ನಡೆದ ಭೀಕರ ಕಾಳಗದ ಹೃದಯವಿದ್ರಾವಕ ಘಟನೆಯೊಂದು ನಡೆದಿದ್ದು ಕೊನೆಗೆ ಎರಡೂ ಪ್ರಾಣಿಗಳು ಜೀವ ಕಳೆದುಕೊಂಡಿವೆ.

ಸುಮಾರು ಒಂದು ಗಂಟೆಗಳ ಕಾಲ ನಡೆದ ಈ ಪೈಪೋಟಿ ಗ್ರಾಮಸ್ಥರಲ್ಲಿ ಆತಂಕ ಮತ್ತು ಅಚ್ಚರಿಯನ್ನು ಮೂಡಿಸಿದೆ.ಗ್ರಾಮದ ನಿವಾಸಿಯೊಬ್ಬರ ಮನೆಯ ಆವರಣದಲ್ಲಿ ಈ ಘಟನೆ ನಡೆದಿದೆ.

ಏಕಾಏಕಿ ಎದುರಾದ ನಾಗರ ಹಾವನ್ನು ಕಂಡ ನಾಯಿ, ತನ್ನ ಸ್ವಭಾವದಂತೆ ಹಾವಿನ ಮೇಲೆ ದಾಳಿ ನಡೆಸಿದೆ.

ಇದರಿಂದ ಹಾವು ಕೂಡ ಪ್ರತಿದಾಳಿ ನಡೆಸಿ ನಾಯಿಯನ್ನು ಹಲವು ಬಾರಿ ಕಚ್ಚಿತು.



ಕಾಳಗದ ಅಂತ್ಯದಲ್ಲಿ ನಾಯಿ ತನ್ನ ಬಲಿಷ್ಠ ದವಡೆಹಲ್ಲುಗಳಿಂದ ನಾಗರಹಾವನ್ನು ಸಂಪೂರ್ಣವಾಗಿ ಕಚ್ಚಿ ಕೊಂದಿದೆ.

ಆದರೆ ನಾಗರಹಾವಿನ ವಿಷಕಾರಿ ಕಡಿತದಿಂದ ನಾಯಿ ಕೂಡ ತೀವ್ರವಾಗಿ ಗಾಯಗೊಂಡಿತ್ತು.

ಹಾವನ್ನು ಸಾಯಿಸಿದ ಬಳಿಕ ನಾಯಿ ತನ್ನ ಬೋನಿಗೆ ತೆರಳಿ ಮಲಗಿಕೊಂಡಿದ್ದು, ಸ್ವಲ್ಪ ಸಮಯದ ಬಳಿಕ ಅಲ್ಲಿಯೇ ಉಸಿರು ಚೆಲ್ಲಿದೆ. ಹಾವಿನ ವಿಷ ನಾಯಿಯ ದೇಹದ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಚಿಕಿತ್ಸೆ ದೊರಕುವ ಮುನ್ನವೇ ನಾಯಿ ಮೃತಪಟ್ಟಿದೆ.

ಘಟನೆಯ ಬಳಿಕ ಮನೆಯವರು ನಾಗರಹಾವಿಗೆ ಶಾಸ್ತ್ರೋಕ್ತವಾಗಿ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆ.

ನಾಯಿ ತನ್ನ ಮಾಲೀಕರನ್ನು ಹಾಗೂ ಮನೆ ಆವರಣವನ್ನು ರಕ್ಷಿಸುವ ಪ್ರಯತ್ನದಲ್ಲಿ ಪ್ರಾಣ ತ್ಯಾಗ ಮಾಡಿದೆ.

ಹಾವು ತನ್ನ ಪ್ರಾಣ ಉಳಿಸಿಕೊಳ್ಳಲು ಹೋರಾಟ ಮಾಡಿದ್ದು, ಈ ಘಟನೆ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಇಟ್ಟಿಗೆ ಗ್ರಾಮದಲ್ಲಿ ಸಂಭವಿಸಿದ್ದು, ನಾಯಿ–ಹಾವು ನಡುವಿನ ದುಃಖಕರ ಕಾಳಗದ ವೀಡಿಯೋ ವೈರಲ್ ಆಗಿದೆ.

# ಕನ್ನಡಕ್ಕೆ ಸಂದ ಬೂಕರ್



## ಸಂಪಾದಕೀಯ

‘ಅಂತಾರಾಷ್ಟ್ರೀಯ ಬೂಕರ್’ ಇದು ಇಂಗ್ಲಿಷ್ ಭಾಷೆಯಲ್ಲಿ ಬರೆದ ಅಥವಾ ಬೇರೆ ಭಾಷೆಗಳಿಂದ ಇಂಗ್ಲಿಷ್‌ಗೆ ಅನು ವಾದಗೊಂಡ ಅತ್ಯುತ್ತಮ ಕಾದಂಬರಿಗೆ ನೀಡ ಲಾಗುವ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿ, 1969ರಲ್ಲಿ ಬೂಕರ್ ಮತ್ತು ಮೆಕ್‌ಕಾನ್ನೆಲ್ ಲಿಮಿಟೆಟ್ ಸಂಸ್ಥೆಯು ‘ಬೂಕರ್ ಪ್ರಶಸ್ತಿ’ಯನ್ನು ನೀಡಲು ಆರಂಭಿಸಿತು. 2015ರವರೆಗೆ ಇಂಗ್ಲಿಷ್ ನಲ್ಲಿ ಪ್ರಕಟವಾದ ಅಥವಾ ಇಂಗ್ಲಿಷ್‌ಗೆ ಅನುವಾದವಾದ ಕೃತಿಗೆ ಎರಡು ವರ್ಷ ಗಳಿಗೊಮ್ಮೆ ಈ ಪ್ರಶಸ್ತಿಯನ್ನು ನೀಡ ಲಾಗುತ್ತಿತ್ತು. 2016ರಿಂದ ಪ್ರತಿ ವರ್ಷ ಒಂದು ಪ್ರತಿಷ್ಠಿತ ಕಾದಂಬರಿಗೆ ‘ಬೂಕರ್’ ಪ್ರಶಸ್ತಿಯನ್ನು ನೀಡಿ ಗೌರವಿಸ ಲಾಗುತ್ತಿದೆ. 2002ರಲ್ಲಿ ‘ಮ್ಯಾನ್ ಗ್ರೂಪ್’ ಸಂಸ್ಥೆ ಪ್ರಶಸ್ತಿಯ ಪ್ರಾಯೋಜಕತ್ವವನ್ನು ವಹಿಸಿ ಕೊಂಡಿತು. ಇದೀಗ ಅಮೆರಿಕದ ದತ್ತಿ ಪ್ರತಿಷ್ಠಾನವಾದ ‘ಕ್ರ್ಯಾಂಕ್ ಸ್ಟಾರ್ಟ್ ಬೂಕರ್’ ಪ್ರಶಸ್ತಿಯ ಪ್ರಾಯೋಜಕತ್ವ ವನ್ನು ವಹಿಸಿ ಕೊಂಡು ಸಂಸ್ಥೆಯು ಈ ಪ್ರಶಸ್ತಿಗೆ ‘ಬೂಕರ್’ ಎಂಬ ಹೆಸರನ್ನಿಟ್ಟಿದೆ.

**ಶ್ರೀಮಂತ ಸಾಹಿತ್ಯ ಪ್ರಶಸ್ತಿ :** ವಿಶ್ವದ ಅತ್ಯಂತ ಶ್ರೀಮಂತ ಸಾಹಿತ್ಯ ಬಹು ಮಾನವಿದು. ಕಾದಂಬರಿ ವಿಜೇತ ರಿಗೆ ಪ್ರತಿಷ್ಠಿತ ಪ್ರಶಸ್ತಿಯ ಜೊತೆಗೆ ರೂ. 57,41,490 ಗೌರವಧನವನ್ನು ನೀಡ ಲಾಗುತ್ತದೆ. ಇದು ವಿಜೇತ ಕಾದಂಬರಿ ಗಾರರ ಮತ್ತು ಅನುವಾ ದಕರ ನಡುವೆ ಹಂಚಿಕೆಯಾಗುತ್ತದೆ.

**ಪ್ರಶಸ್ತಿ ಆಯ್ಕೆ ಹೇಗೆ? :** ಪ್ರತಿವರ್ಷ ಬೂಕರ್ ಪ್ರಶಸ್ತಿಯ ಆಯ್ಕೆಗಾಗಿ ಲೇಖಕರು, ಪ್ರಕಾಶಕರು, ಪ್ರವರ್ತಕರು, ರಾಜ ಕಾರಣಿಗಳು, ನಟರು, ಕಲಾವಿದರು ಮತ್ತು ಸಂಗೀತಗಾರರನ್ನೊಳಗೊಂಡ ಹೀಗೆ ಬೇರೆ ಬೇರೆ ಕ್ಷೇತ್ರಗಳಿಂದ ಆಯ್ದ ಐದು ಮಂದಿಯ ಸಮಿತಿಯೊಂದನ್ನು ರಚಿಸ ಲಾಗುತ್ತದೆ. ಈ ತಂಡ ಅಂತಿಮವಾಗಿ ಆರು ಕೃತಿಗಳನ್ನು ಆಯ್ಕೆ ಮಾಡುತ್ತದೆ. ನಂತರ ಆಯ್ಕೆಗೊಂಡ 6 ಕೃತಿಗಳನ್ನು ಮೂರು ಬಾರಿ ಓದಲಾಗುತ್ತದೆ. ಇದರಲ್ಲಿ ಅಂತಿಮವಾಗಿ ಒಂದು ಪುಸ್ತಕವನ್ನು ಪ್ರಶಸ್ತಿಗೆ ಪರಿಗಣಿಸ ಲಾಗುತ್ತದೆ.

**ಬಾನು ಮುಸ್ತಾಕ್‌ರವರಿಗೆ ಒಲಿದ ಬೂಕರ್ :** 2025ರ ಸಾಲಿನ ‘ಅಂತಾರಾಷ್ಟ್ರೀಯ ಪ್ರಶಸ್ತಿ’. ಕನ್ನಡದ ಬಾನು ಮುಸ್ತಾಕ್‌ರವರ ‘ಹಾರ್ಟ್‌ಲ್ಯಾಂಪ್’ ಕಥಾ ಸಂಕಲನಕ್ಕೆ ದೊರೆತಿದೆ. ಇದು ಕನ್ನಡಕ್ಕೆ ದೊರೆತ ಮೊದಲ ಬೂಕರ್ ಪ್ರಶಸ್ತಿಯಾಗಿದ್ದು ಕಥಾ ಸಂಕಲನಕ್ಕೆ ದೊರೆ ತ ಮೊದಲ ಪ್ರಶಸ್ತಿ ಯೂ ಹೌದು. ಕರ್ನಾಟಕದ ಹಾಸನದವರಾದ ವಕೀಲೆ, ಚಳುವಳಿಗಾರ್ತಿ, ಕಥೆಗಾರ್ತಿ ಯಾಗಿರುವ ಬಾನು ಮುಸ್ತಾಕ್‌ರವರ ‘ಎದೆಯ ಹಣತೆ’ ಕಥಾ ಸಂಕಲನವನ್ನು ಕರ್ನಾಟಕದ ದೀಪಾ ಭಾಸ್ತಿಯವರು ‘ಹಾರ್ಟ್ ಲ್ಯಾಂಪ್’ ಎಂದು ಇಂಗ್ಲಿಷ್ ಅನುವಾದಿಸಿದ್ದಾರೆ.

**ಬೂಕರ್ ವಿಜೇತರು :** 2020ರಲ್ಲಿ ಅಮೇರಿಕಾದ ಡಾಗ್ಲಾಸ್ ಸ್ಟುವರ್ಟ್ ಅವರ ‘ಶುಗ್ಗಿ ಬೈನ್’, 2021ರಲ್ಲಿ ದಕ್ಷಿಣ ಆಫ್ರಿಕಾದ ಡ್ಯಾಮನ್ ಗಾಲ್ಗುಟ್ ಅವರ ‘ದಿ ಪ್ರಾಮಿಸ್’, 2022ರಲ್ಲಿ ಶ್ರೀಲಂಕಾದ ಶಹಾನ್ ಕರುಣತಿಲಕ ಅವರ ‘ದಿ ಸೆವೆನ್ ಮೂನ್ಸ್ ಆಫ್ ಮಾಲಿ ಆಲೇಡಾ’, 2023ರಲ್ಲಿ ಐರಿಸ್ ಬರಹಗಾರ ಹಾಲ್ ಪಿಂಚ್ ಅವರ ‘ಸೊಫೆಟ್ ಸಾಂಗ್’, 2024ರಲ್ಲಿ ಸಮಂತಾ ಹಾರ್ವೆ ಅವರ ‘ಆರ್ಬಿಟಲ್’ ಕಾದಂಬರಿಗೆ ಈ ಪ್ರಶಸ್ತಿ ದೊರೆತಿದೆ.

**ಭಾರತಕ್ಕೆ ಸಂದ ಪ್ರಶಸ್ತಿ :** 1971ರಲ್ಲಿ ವಿ.ಎಸ್.ನೈಪಾಲ್‌ರವರ ‘ಸ್ವತಂತ್ರ ರಾಜ್ಯದಲ್ಲಿ’, 1981ರಲ್ಲಿ ಸಲ್ಮಾನ್ ರರವರ ‘ಮಿಡ್ ನೈಟ್ ಚಿಲ್ಡನ್ 1997ರಲ್ಲಿ ಅರುಂಧತಿ ರಾಯ್‌ರವರ ‘ಸಣ್ಣ ವಸ್ತುಗಳ ದೇವರು’, 2006ರಲ್ಲಿ ಕಿರಣ್ ದೇಸಾಯಿಯವರ ‘ನಷ್ಟದ ಅನುವಂಶಿಕತೆ’, 2008ರಲ್ಲಿ ಅರವಿಂದ ಅಡಿಗರವರ ಬಿಳಿ ಹುಲಿ ಸಾಹಿತ್ಯ’ ಕಾದಂಬರಿಗಳಿಗೆ, 2022 ರಲ್ಲಿ ಗೀತಾಂಜಲಿ ಶ್ರೀಯವರ ‘ತೋಂಬ್ ಆಫ್ ಸ್ಯಾಂಡ್’, 2025 ರಲ್ಲಿ ಬಾನು ಮುಸ್ತಾಕ್‌ರವರ ‘ಹಾರ್ಟ್ ಲ್ಯಾಂಪ್’ ಕಥಾ ಸಂಕಲ ನಕ್ಕೆ ಹೀಗೆ ಈವರೆಗೆ ಏಳು ಮಂದಿ ಪ್ರಶಸ್ತಿ’ ಭಾರತೀಯರಿಗೆ, ಭಾರತ ಮೂಲದವರಿಗೆ ‘ಬೂಕರ್ ಪ್ರಶಸ್ತಿ’ ಸಂದಿದೆ.

**ಅರ್ಜಿ ಸಲ್ಲಿಸುವುದು ಹೇಗೆ? :** ಬೂಕರ್ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಲೇಖಕರು ತಮ್ಮ ಕೃತಿಯನ್ನು ಪ್ರಕಾಶಕರಿಗೆ ಸಲ್ಲಿಸಬೇಕು. ಪ್ರಕಾಶಕರು ಲೇಖಕರ ಕೃತಿಗಳನ್ನು ನಾಮ ನಿರ್ದೇಶನ ಮಾಡು ತ್ತಾರೆ. ಬೂಕರ್ ಪ್ರಶಸ್ತಿ ಸಮಿತಿಯು ಕೃತಿಗಳನ್ನು ಪರಿಶೀಲಿಸಿ ಉತ್ತಮ ಕೃತಿಗಳ ಕಿರು ಪಟ್ಟಿಯನ್ನು ತಯಾರಿ ಸುತ್ತದೆ. ನಂತರ ಸಮಿತಿಯು ವಿಜೇತ ಕೃತಿಯನ್ನು ಆಯ್ಕೆ ಮಾಡುತ್ತದೆ. ಅರ್ಜಿ ಸಲ್ಲಿಸುವ ಬಗ್ಗೆ ಹೆಚ್ಚಿನ ಮಾಹಿತಿಗಳು ಜಾಲತಾಣಗಳಲ್ಲಿ ಲಭ್ಯವಿದೆ.

# ಎಂಎಸ್ಸಿ ಪರಿಸರ ವಿಜ್ಞಾನ : ತರೀಕೆರೆ ಕರಕುಚ್ಚಿಯ ಸ್ವಾತಿಗೆ 4 ಚಿನ್ನದ ಪದಕ



ಎಂಎಸ್‌ಸಿ ಪರಿಸರ ವಿಜ್ಞಾನದಲ್ಲಿ ಸಾಧನೆ ಮಾಡಿರುವ ತರೀಕೆರೆ ತಾಲ್ಲೂಕು ಕರಕುಚ್ಚಿ ಬಿ.ಕಾಲೋನಿಯ ಜಿ.ಎಂ.ಸ್ವಾತಿ ನಾಲ್ಕು ಚಿನ್ನದ ಪದಕ ನಗದು ಬಹುಮಾನಕ್ಕೂ ಭಾಜನಳಾಗಿದ್ದಾಳೆ.

ಕರಕುಚ್ಚಿ ಬಿ.ಕಾಲೋನಿಯ ಏಕೆ ಮೈಸೂರು ವಿಶ್ವ ವಿದ್ಯಾ ನಿಲಯ 10ನೇ ವಾರ್ಷಿಕ ಘಟಿಕೋತ್ಸವದಲ್ಲಿ 4 ಚಿನ್ನದ ಪದಕ ಹಾಗೂ ನಗದು ಬಹುಮಾನ ಪಡೆದಿದ್ದಾಳೆ.

ಈಕೆ ಜಿ.ಟಿ.ಮಹಾಂತೇಶ್ ಹಾಗೂ ಕರಕುಚ್ಚಿ ಬಿ.ಕಾಲೋನಿಯ ಅಂಗನವಾಡಿ ಕಾರ್ಯಕರ್ತೆ ಕೆ.ಎಸ್.ಸವಿತ ಅವರ ಪುತ್ರಿ.

ಹೆಚ್.ಆರ್. ಬಸವರಾಜು ಜೆಮಿನಿ ಡಿಸ್ಟಿಲರೀಸ್ ದತ್ತಿ ಚಿನ್ನದ ಪದಕ, ಜಿಂದಾಲ್ ಜುಬಿಲಿ ದತ್ತಿ ಚಿನ್ನದ ಪದಕ, ಲೇ.ಬಿ.ಬಸವಲಿಂಗಪ್ಪ ಸ್ಮರಣಾರ್ಥ ಟ್ರಸ್ಟ್ ದತ್ತಿ ಚಿನ್ನದ ಪದಕ ಹಾಗೂ ಶ್ರೀಮತಿ ಮೀನಾಕ್ಷಮ್ಮ ಚಂದ್ರಶೇಖರ್ ಚಿನ್ನದ ಪದಕ ಹಾಗೂ ಶ್ರೇಷ್ಠತೆಗಾಗಿ ಶ್ರೀಮೂರ್ತಿಯವರ ನಗದು ಬಹುಮಾನ ದೊರೆತಿದೆ.

# ಯುವತಿ ಸಾವು : ಜಿಲ್ಲಾಸ್ಪತ್ರೆ ಮುಂಭಾಗ ಪ್ರತಿಭಟನೆ



ವೈದ್ಯರ ನಿರ್ಲಕ್ಷ್ಯದಿಂದ ಯುವತಿ ಸಾವು ಎಂದು ಆರೋಪಿಸಿ ಇಲ್ಲಿನ ಜಿಲ್ಲಾಸ್ಪತ್ರೆ ಮುಂಭಾಗ ಮೃತದೇಹವಿಟ್ಟು ಪ್ರತಿಭಟನೆ ನಡೆದಿದೆ

ಕಾಫಿ ಹಣ್ಣು ಕೊಯ್ಯುವಾಗ ಮರ ಬಿದ್ದು ತೀವ್ರ ಅಸ್ವಸ್ಥಗೊಂಡಿದ್ದ ಯುವತಿ ಆಸ್ಪತ್ರೆಗೆ ಕರೆತಂದಾಗ ವೈದ್ಯರಿಲ್ಲದೆ ನರ್ಸ್–ಕಾಂಪೌಂಡರ್ ಚಿಕಿತ್ಸೆ ನೀಡಿದ ಆರೋಪ ಮಾಡಿದ್ದಾರೆ.

ಬ್ಯಾಂಡೇಜ್ ಹಾಕಿ ಶಿವಮೊಗ್ಗಕ್ಕೆ ಕರೆದೊಯ್ಯಲು ನರ್ಸ್–ಕಾಂಪೌಂಡರ್ ಸಲಹೆ ಕೊಟ್ಟಿದ್ದಾರೆ. ಶಿವಮೊಗ್ಗಕ್ಕೆ ಹೋಗುವಾಗ ತರೀಕೆರೆ ಬಳಿ ಯುವತಿ ಸಾವು ಕವಿತಾ (21) ಮೃತ ದುರ್ದೈವಿ ಚಿಕ್ಕಮಗಳೂರು ತಾಲೂಕಿನ ಹೊಸಪೇಟೆ ಗ್ರಾಮದಲ್ಲಿ ಘಟನೆ ಮೃತದೇಹವನ್ನ ವಾಪಸ್ ತಂದು ಆಸ್ಪತ್ರೆ ಮುಂದಿಟ್ಟು ಪ್ರತಿಭಟನೆ ಮಾಡಿದ್ದಾರೆ.

ಸ್ಕ್ಯಾನ್ ಮಾಡದೆ, ಎಕ್ಸ್ ರೇ ಮಾಡದೆ, ಇಂಜಕ್ಷನ್ ನೀಡದೆ ಹೇಗೆ ಶಿವಮೊಗ್ಗಕ್ಕೆ ರೆಫರ್ ಮಾಡಿದ್ರಿ ಎಂದು ಪ್ರಶ್ನಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಸರ್ಜನ್ ಬರಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕರ ಚುನಾವಣೆಯಲ್ಲಿ ಸತತವಾಗಿ 3ನೇ ಬಾರಿಗೆ (ಹ್ಯಾಟ್ರಿಕ್) ಆಯ್ಕೆಯಾಘಲು ಸಹಕರಿಸಿದ ಎಲ್ಲಾ ಸಹಕಾರ ಸಂಘಗಳ ಪ್ರತಿನಿಧಿಗಳಿಗೆ, ಮುಖಂಡರುಗಳಿಗೆ, ಕಾರ್ಯಕರ್ತರುಗಳಿಗೆ ಹಾಗೂ ಪ್ರತ್ಯಕ್ಷ/ ಪರೋಕ್ಷವಾಗಿ ಸಹಕರಿಸಿದ ನನ್ನ ಪ್ರೀತಿಯ ಬಂಧುಗಳಿಗೆ

ಹೃದಯಪೂರ್ವಕ ಅಭಿಂದನೆಗಳು



ಟಿ.ಎಲ್.ರಮೇಶ್

ನಿರ್ದೇಶಕರು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ, ಚಿಕ್ಕಮಗಳೂರು.
ಮಾಜಿ ಅಧ್ಯಕ್ಷರು, ಪಿ.ಎಲ್.ಡಿ. ಬ್ಯಾಂಕ್, ತರೀಕೆರೆ.
ಮಾಜಿ ಉಪಾಧ್ಯಕ್ಷರು, ಸಿ.ಡಿ.ಸಿ.ಸಿ. ಬ್ಯಾಂಕ್, ಚಿಕ್ಕಮಗಳೂರು.
ನಿರ್ದೇಶಕರು, ಮ್ಯಾಮ್‌ಕೋಸ್, ಶಿವಮೊಗ್ಗ.
ನಿರ್ದೇಶಕರು, ಜಿಲ್ಲಾ ಸಹಕಾರಿ ಯೂನಿಯನ್.
ನಿರ್ದೇಶಕರು, ಶ್ರೀರೇವಣಸಿದ್ದೇಶ್ವರ ಕೃಷಿ ಪತ್ತಿನ ಸಹಕಾರ ಸಂಘ.
ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಸಹಕಾರ ಭಾರತಿ.

# ಡಿ.ಡಿ.ಸಿ ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ಎನ್.ಡಿ.ಎ. ಬೆಂಬಲಿತ ಅಭ್ಯರ್ಥಿಗಳು ಜಯ

ತೀವ್ರ ಕುತೂಹಲ ಕೆರಳಿಸಿದ್ದ ಚಿಕ್ಕಮಗಳೂರು ಸಹಕಾರ ಕೇಂದ್ರ ಬ್ಯಾಂಕಿನ ನಿರ್ದೇಶಕರ ಚುನಾವಣೆಯಲ್ಲಿ ಎನ್ ಡಿಎ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದಾರೆ. ಈ ಮೂಲಕ ಬಿಜೆಪಿ ಪಕ್ಷಕ್ಕೆ ಸೇರಿದ ನಿರ್ದೇಶಕರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗುವುದರಲ್ಲಿ ಅನುಮಾನವೇ ಇಲ್ಲ. ಇದರೊಂದಿಗೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿದ್ದ ಇಬ್ಬರು ವಿಧಾನ ಪರಿಷತ್ ಸದಸ್ಯರು ಗೆಲುವು ಸಾಧಿಸಿದರೆ, ಶಾಸಕರೋರ್ವರು ಪರಾಭವಗೊಂಡಿದ್ದಾರೆ.

ಹೌದು. ಚಿಕ್ಕಮಗಳೂರು ಡಿಸಿಸಿ ಬ್ಯಾಂಕಿನ ನಿರ್ದೇಶಕ ಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯರಾದ ಎಸ್.ಎಲ್.ಭೋಜೇಗೌಡ, ಸಿ.ಟಿ.ರವಿ, ಕಡೂರು ಶಾಸಕ ಕೆ.ಎಸ್. ಆನಂದ್ ಸ್ಪರ್ಧೆ ಮಾಡಿದ್ದರು. ಹೀಗಾಗಿಯೇ ಸಹಕಾರಿ ಸಂಘದ ಚುನಾವಣಾ ಕಣ ರಂಗೇರಿತ್ತು. ಆದರೆ ಇಬ್ಬರು ಪರಿಷತ್ ಸದಸ್ಯರು ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದರೆ, ಶಾಸಕರು ಪರಾಭವಗೊಂಡು ನಿರಾಸೆ ಅನುಭವಿಸಿದ್ದಾರೆ.

ಬ್ಯಾಂಕಿನ ಆಡಳಿತ ಮಂಡಳಿಯ ಒಟ್ಟು 13 ನಿರ್ದೇಶಕರ ಸ್ಥಾನಗಳ ಪೈಕಿ 8 ಸ್ಥಾನಗಳಿಗೆ ಅವಿರೋಧ



ಆಯ್ಕೆಯಾಗಿದ್ದರೆ, ಇನ್ನುಳಿದ 5 ಸ್ಥಾನಗಳಿಗೆ ಶನಿವಾರ ಚುನಾವಣೆ ನಡೆಯಿತು. ಕಣದಲ್ಲಿ ಸಿ.ಟಿ. ರವಿ, ಎಸ್.ಎಲ್. ಭೋಜೇಗೌಡ, ಕೆ.ಎಸ್. ಆನಂದ್, ಎಂ.ಪಿ. ಕುಮಾರಸ್ವಾಮಿ ಸೇರಿದಂತೆ 10 ಮಂದಿ ಇದ್ದರು.

ನಾಲ್ಕು ಕ್ಷೇತ್ರಗಳ ಪೈಕಿ ಚಿಕ್ಕಮಗಳೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಎರಡು ಸ್ಥಾನಗಳ ಫಲಿತಾಂಶ ಕುತೂಹಲ ಮೂಡಿಸಿತ್ತು. ಈ ಕ್ಷೇತ್ರದಲ್ಲಿ ಸಿ.ಟಿ. ರವಿ, ಎಸ್.ಎಲ್. ಭೋಜೇಗೌಡ ಹಾಗೂ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎಂ.ಎಸ್. ನಿರಂಜನ್ ಸ್ಪರ್ಧೆ ಮಾಡಿದ್ದರು.

ನಿರಂಜನ್ ಅವರು ತಾವು ಬಿಜೆಪಿ ಬೆಂಬಲಿತ ಅಭ್ಯರ್ಥಿ ಎಂಬುದಾಗಿ ಘೋಷಣೆ ಮಾಡಿದ್ದರು. ಅದ್ದರಿಂದ ಮುಂಜಾಗ್ರತೆಯಾಗಿ ಮೈತ್ರಿ ಪಕ್ಷಗಳ ಬೆಂಬಲಿತ ಸಹಕಾರ ಸಂಘಗಳ ಮತದಾರರನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗಿತ್ತು.

ಶನಿವಾರ ಬೆಳಿಗ್ಗೆ 9 ಗಂಟೆಗೆ ಇಲ್ಲಿನ ಡಿಸಿಸಿ ಬ್ಯಾಂಕ್‌ನಲ್ಲಿ ಚುನಾವಣಾಧಿಕಾರಿ ಹಾಗೂ ಚಿಕ್ಕಮಗಳೂರು ಉಪ ವಿಭಾಗಾಧಿಕಾರಿ ಸುದರ್ಶನ್ ಹಾಗೂ ಸಹಾಯಕ ಚುನಾವಣಾಧಿಕಾರಿ ರೇಷ್ಮಾ ಶೆಟ್ಟಿ ಅವರು ಚುನಾವಣಾ ಪ್ರಕ್ರಿಯೆಯನ್ನು ಆರಂಭಿಸಿದರು. ಚುನಾವಣೆ ಹಿನ್ನಲೆಯಲ್ಲಿ ಮತದಾನ ಕೇಂದ್ರದ 100 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು.

ಮತದಾನ ಆರಂಭವಾಗುತ್ತಿದ್ದಂತೆ ಪ್ರವಾಸ ತೆರಳಿದ್ದ 28 ಮಂದಿ ಮತದಾರರು ಒಂದೇ ವಾಹನದಲ್ಲಿ ಆಗಮಿಸಿದರು. ಅವರೊಂದಿಗೆ ಸಿ.ಟಿ.ರವಿ, ಎಸ್.ಎಲ್.ಭೋಜೇಗೌಡ ಹಾಜರಿದ್ದರು. ವಾಹನದಿಂದ ಕೆಳಗೆ ಇಳಿಯುತ್ತಿದ್ದಂತೆ ನೇರವಾಗಿ ಡಿಸಿಸಿ ಬ್ಯಾಂಕಿನ ಮತದಾನ ಕೇಂದ್ರದೊಳಗೆ ತೆರಳಿದರು.

ಸಂಜೆ 4 ಗಂಟೆಯ ವೇಳೆಗೆ ಮತದಾನ ಪ್ರಕ್ರಿಯೆ ಮುಕ್ತಾಯಗೊಂಡಿತು. ನಂತರ ಮತ ಎಣಿಕೆ ಆರಂಭಗೊಡು ಸಂಜೆ 5.30 ರವೇಳೆಗೆ ಫಲಿತಾಂಶವನ್ನು ಚುನಾವಣಾಧಿಕಾರಿಗಳು ಪ್ರಕಟಿಸಿದರು.

ಚಿಕ್ಕಮಗಳೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಎರಡು ಸ್ಥಾನಗಳಿಗೆ ಸ್ಪರ್ಧೆ ಮಾಡಿದ್ದ 3 ಮಂದಿಯ ಪೈಕಿ ಎಸ್.ಎಸ್. ಭೋಜೇಗೌಡ, ಸಿ.ಟಿ. ರವಿ ಜಯಗಳಿದ್ದು, ಎಂ.ಎಸ್. ನಿರಂಜನ್ ಪರಾಭವಗೊಂಡಿದ್ದಾರೆ. ಕೊಪ್ಪ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರಕ್ಕೆ ಸ್ಪರ್ಧೆ ಮಾಡಿದ್ದ ಬಿ.ಎಸ್.ಸತೀಶ್ ಅವರು ಜಯಗಳಿಸಿದ್ದು, ಯು.ಎಸ್. ಪ್ರಜ್ವಲ್, ಕೆ.ಎಸ್. ರವೀಂದ್ರ ಅವರು ಪರಾಭವಗೊಂಡಿದ್ದಾರೆ.

ಜಿಲ್ಲೆಯ ಎಲ್ಲ ತಾಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ಕ್ಷೇತ್ರದ ಒಂದು ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಎಚ್.ಕೆ. ದಿನೇಶ್ ಹೊಸೂರು ಜಯಗಳಿಸಿದ್ದು, ಕಡೂರು ಕ್ಷೇತ್ರದ ಶಾಸಕ ಕೆ.ಎಸ್. ಆನಂದ್ ಅವರು ಪರಾಭವಗೊಂಡಿದ್ದಾರೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ಪಟ್ಟಣ ಸಹಕಾರ ಬ್ಯಾಂಕ್ ಹಾಗೂ ಇನ್ನುಳಿದ ಎಲ್ಲಾ ಸಹಕಾರ ಸಂಘಗಳ ಕ್ಷೇತ್ರದ ಒಂದು ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಟಿ.ಎಲ್. ರಮೇಶ್ ಜಯಗಳಿಸಿದರೆ, ಮೂಡಿಗೆರೆ ಕ್ಷೇತ್ರದ ಮಾಜಿ ಶಾಸಕ ಎಂ.ಪಿ.ಕುಮಾರಸ್ವಾಮಿ ಪರಾಭವಗೊಂಡಿದ್ದಾರೆ.

**ಪತ್ರಿಕಾ ಪ್ರಕಟಣೆ**

## ಸಾರ್ವಜನಿಕರ ಗಮನಕ್ಕೆ

**ಈ ಕೆಳಗೆ ಹೇಳಿರುವ ನೋಟೀಸುದಾರರು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ. ಈ ಕೆಳಗೆ ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತಿನ ಮಾಲೀಕರುಗಳಾಗಿದ್ದು ಸಧ್ಯ ತಾವು ಕೇರಳದಲ್ಲಿ ವಾಸಿಸುತ್ತಿರುವುದರಿಂದ ಆಸ್ತಿಯ ನಿಗಾ ವಹಿಸಲು ಶ್ರೀ ಕಾರ್ತಿಕ್‌ರವರಿಗೆ ಸರ್ವೋಕ್ತ ನಾಮೆ (ಜಿ.ಪಿ.ಎ.) ನೀಡಿದ್ದು ಸದರಿಯವರು ನೋಟೀಸ್‌ದಾರರ ಹಿತಾಶಕ್ತಿಗೆ ಅನುಗುಣವಾಗಿ ಕೆಲಸ ನಿರ್ವಹಿಸದೆ ಅವ್ಯವಹಾರ ನಡೆಸುತ್ತಿರುವುದು ಮತ್ತು ನೋಟೀಸ್ ದಾರರ ಇಚ್ಛೆಗೆ ವಿರುದ್ಧವಾಗಿ ಸಾರ್ವಜನಿಕರೊಂದಿಗೆ ವ್ಯವಹಾರ ಮಾಡುತ್ತಿರುವುದು ಕಂಡು ಬಂದಿದ್ದರಿಂದ ದಿನಾಂಕ : 17-01-2026ರಂದು ಒಂದು ನೊಂದಾಯಿತ ವಕೀಲರ ತಿಳುವಳಿಕೆ ನೋಟೀಸು ನೀಡಿ ಸದರಿ ಜಿ.ಪಿ.ಎ.ಅನ್ನು ರದ್ದುಪಡಿಸಲಾಗಿದ್ದು ಇನ್ನೂ ಮುಂದೆ ಯಾರಾದರೂ ಸದರಿ ಕಾರ್ತಿಕ್‌ರವರೊಂದಿಗೆ ಮೇಲೆ ಹೇಳಿದ ಜಿ.ಪಿ.ಎ.ಆಧಾರವಾಗಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದಾದರೂ ವ್ಯವಹಾರ ಮಾಡಿದ್ದಲ್ಲಿ ಅದಕ್ಕೆ ಈ ನೋಟೀಸ್‌ದಾರರು ಜವಾಬ್ದಾರರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.**

### ಷೆಡ್ಯೂಲ್

**ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಹೋಬಳಿ, ಮಂಚೆತವರು ಗ್ರಾಮದ ಸ.ನಂ. 6/1ರಲ್ಲಿ 4 ಎಕರೆ ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ಸ.ನಂ. 6/1ರಲ್ಲಿ 4 ಎಕರೆ ಜಮೀನು.**

**ಸಿ.ಕೆ.ಸುರೇಂದ್ರ ಬಿನ್ ಪಿ.ಕೆ.ಕೃಷ್ಣನ್**
**ಬಿ.ಜಿ.ಅಜಿತ ಬಿನ್ ಜನಾರ್ಧನ**
**ಕೊಂ. ಸಿ.ಕೆ.ಸುರೇಂದ್ರ**
**ಕುರುಕನಮಟ್ಟಿ ಎಸ್ಟೇಟ್**
**ಲಿಂಗದಹಳ್ಳಿ ಗ್ರಾಮ ಮತ್ತು ಹೋಬಳಿ.**
**ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.**

Edited, Printed and Published by: Sureshchandra, Tarikere Talluk, Chikamagalur District, Karnataka
Printed At : hosaadhyaya Printers, Subhash nagara, K.M.road, Kadur, Chikamagaluru District, Karnataka.